ರಾಜ್ಯದಲ್ಲಿನ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ

1382(1847) - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆಯ ಅನುಕೂಲವನ್ನು ರೈತರಿಗೆ ಕಲ್ಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಈ ಬಗೆಗಿನ ವಿವರಗಳೇನು?

ಅ) ಹೌದು.

ಶ್ರೀ. ರಾಜ್ ಅಮರೇಶ್ವರ ನಾಯಕ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) 1) ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸಹಕಾರಿ ವಲಯದಲ್ಲಿ ಹಾಪ್ ಕಾಮ್ಸ್, ಕೆ.ಹೆಚ್.ಎಫ್. ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ತೋಟಗಾರಿಕೆ ಬೆಳೆಗಾರರ ಮಾರಾಟ ಮತ್ತು ಸಹಕಾರ ಸಂಸ್ಕರಣ ಸಂಘಗಳನ್ನು ಸ್ಥಾಪಿಸಲಾಗಿದೆ.

2) ರಾಜ್ಯ ಸರ್ಕಾರದ ಪ್ರೋತ್ಸಾಹ ಪಡೆದ ಎಸ್.ಡಿ.ಡಿ.ಬಿ. ಸಂಸ್ಥೆಯು ಹಣ್ಣು ಮತ್ತು ತರಕಾರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಒಂದು ಬೃಹತ್ ಮಾರುಕಟ್ಟೆ, ಸಂಕೀರ್ಣವನ್ನು ಸುಮಾರು ರೂ. 150.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ.

ತೆಂಗಿನ ನುಸಿಪೀಡೆ ರೋಗ ನಿಯಂತ್ರಣ

1383(1934) - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೆಂಗಿನ ಮರಕ್ಕೆ ನುಸಿಪೀಡೆ ರೋಗವನ್ನು ತಡೆಗಟ್ಟಲು ಸರ್ಕಾರವು ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು?

ಆ) ನುಸಿಪೀಡೆ ರೋಗವನ್ನು ನಿಯಂತ್ರಿಸಲಾಗಿದೆಯೇ?

ಇ) ಇದುವರೆವಿಗೂ ನುಸಿಪೀಡೆ ರೋಗ ತಡೆಗಟ್ಟಲು ಸರ್ಕಾರದಿಂದ ಖರ್ಚಾಗಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಈ) ನುಸಿಪೀಡೆ ತೆಂಗು ಬೆಳೆಗಾರರಿಗೆ ಪರಿಹಾರವೇನಾದರು ನೀಡಲಾಗುವುದೆ?

ಶ್ರೀ ರಾಜ ಅಮರೇಶ್ವರ ನಾಯಕ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ನುಸಿ ನಿಯಂತ್ರಣೆಗೆ ಕೈಗೊಂಡ ಕ್ರಮಗಳು ಇಂತಿವೆ.

1) ನುಸಿಬಾಧಿತ ತೆಂಗಿನ ಮರಗಳನ್ನು ಸಮೀಕ್ಷೆ ಮಾಡಲಾಗಿದೆ. 12 ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಒಟ್ಟು 433 ಲಕ್ಷ ಮರಗಳಿಗೆ ನುಸಿ ಬಾಧೆ ತಗುಲಿದೆ ಎಂದು ತಿಳಿದು ಬಂದಿದೆ.

2) ವಿಜ್ಞಾನಿಗಳೊಂದಿಗೆ ಚರ್ಚಿಸಿ ಕೈಗೊಳ್ಳಬೇಕಾದ ಹತೋಟಿ ಕ್ರಮಗಳ ಬಗ್ಗೆ ರೂಪುರೇಷೆಗಳನ್ನು ನಿಗದಿಪಡಿಸಲಾಗಿದೆ. ನುಸಿ ಬಾಧಿತ ಮರಗಳಿಗೆ ಮೂರು ಹಂತದಲ್ಲಿ ರಾಸಾಯನಿಕ ಮತ್ತು ಜೈವಿಕ ಕೀಟನಾಶಕಗಳಿಂದ ಕಾಂಡದ ಮುಖಾಂತರ ಚುಚ್ಚುಮದ್ದು ನೀಡಲು ತೀರ್ಮಾನಿಸಲಾಗಿದೆ.

3) ಔಷಧೋಪಚಾರ ಮಾಡಲು ಔಷಧಿ ಮತ್ತು ಅಗತ್ಯವಿರುವ ಪರಿಕರಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

4) ಕೇಂದ್ರ ಸರ್ಕಾರದ ನೆರವು ಕೋರಿ ನುಸಿ ನಿಯಂತ್ರಣೆಗಾಗಿ 166 ಕೋಟಿ ರೂ.ಗಳಿಗೆ ಬೇಡಿಕೆ ಸಲ್ಲಿಸಲಾಗಿದೆ.

5) ರೈತರು ಮತ್ತು ಸಾರ್ವಜನಿಕರಲ್ಲಿ ನುಸಿ ನಿಯಂತ್ರಣೆ ಬಗ್ಗೆ ವಿಸ್ತರಣೆ ಮತ್ತು ಪ್ರಚಾರ ಮಾಧ್ಯಮಗಳ ಮೂಲಕ ತಿಳುವಳಿಕೆ ನೀಡಲಾಗುತ್ತಿದೆ.

6) ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಗಳು ನುಸಿ ನಿಯಂತ್ರಣೆ ಕ್ರಮಗಳನ್ನು ಕೈಗೊಳ್ಳುತ್ತಿವೆ.

ಆ) ಮೂರು ಹಂತದ ಉಪಚಾರ ಕ್ರಮಗಳನ್ನು ಕೈಗೊಳ್ಳುವುದರಿಂದ ನುಸಿ ಬಾಧೆಯನ್ನು ತಾತ್ಕಾಲಿಕವಾಗಿ ನಿಯಂತ್ರಿಸಬಹುದೆಂದು ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಆದರೆ ಇದನ್ನು ಸಂಪೂರ್ಣವಾಗಿ ಹತೋಟಿಗೆ ತರಲು ಸಾಧ್ಯವಿರುವುದಿಲ್ಲವೆಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

ಇ) ರೂ. 895.22 ಲಕ್ಷ ಜಿಲ್ಲಾವಾರು ವಿವರಗಳನ್ನು ಅನುಬಂಧ. 1ರಲ್ಲಿ ಒದಗಿಸಿದೆ.

ಈ) ಇಲ್ಲ.

ಅನುಬಂಧ-1

ನುಸಿಪೀಡೆ ನಿಯಂತ್ರಣಕ್ಕೆ ಜಿಲ್ಲಾವಾರು ಖರ್ಚಾಗಿರುವ ಹಣದ ವಿವರಗಳು

ಜಿಲ್ಲೆಯ ಹೆಸರು	ಖರ್ಚಾಗಿರುವ ಅನುದಾನ (ರೂ. ಲಕ್ಷಗಳಲ್ಲಿ)		
	1999-2000	2001-2002	ಒಟ್ಟು
1. ಬೆಂಗಳೂರು ಗ್ರಾಮಾಂತರ	23.57	74.64	98.21
2. ಬೆಂಗಳೂರು ನಗರ	14.17	12.47	26.64
3. ಮಂಡ್ಯ	27.99	123.13	151.12
4. ತುಮಕೂರು	35.13	145.00	180.13
5. ಕೋಲಾರ	26.70	4.35	31.05
6. ಮೈಸೂರು	19.12	0.37	19.49

1	2	3	4	5
7.	ಚಾಮರಾಜನಗರ	13.24	19.20	32.44
8.	ಚಿತ್ರದುರ್ಗ	24.49	133.00	157.49
9.	ದಾವಣಗೆರೆ	4.50	11.88	16.38
10.	ಹಾಸನ	26.36	6.74	33.10
11.	ಶಿವಮೊಗ್ಗ	2.50	8.50	11.00
12.	ಚಿಕ್ಕಮಗಳೂರು	21.45	7.12	28.57
13.	ಉತ್ತರ ಕನ್ನಡ	0.98	-	0.98
14.	ದಕ್ಷಿಣ ಕನ್ನಡ	-	-	-
ತೋ.ಉ.ನಿ. (ಸಸ್ಯ ಸಂರಕ್ಷಣೆ), ಲಾಲ್ ಬಾಗ್, ಬೆಂಗಳೂರು.		-	108.60	108.60
	ಒಟ್ಟು	240.22	655.00	895.22

ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ದಾಸ್ತಾನು

1384(1935) - ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-01 ಮತ್ತು 2001-02ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರಿಫ್ (ಮುಂಗಾರು) ಮತ್ತು ಸಮ್ಮರ್ (ಬೇಸಿಗೆ ಬೆಳೆ)ನಿಂದ ಉತ್ಪಾದನೆಯಾದ ಆಹಾರ ಧಾನ್ಯಗಳೆಷ್ಟು?

ಆ) ರಾಜ್ಯದಲ್ಲಿ ಈ ಸಾಲುಗಳಲ್ಲಿ ಆಹಾರ ಧಾನ್ಯಗಳ ಬೆಳೆಗಳ ಉತ್ಪಾದನೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಸರ್ಕಾರ ರೈತರಿಂದ ಬೆಂಬಲ ಬೆಲೆಗೆ ಖರೀದಿ ಮಾಡಿರುವ ಆಹಾರ ಧಾನ್ಯಗಳ ದಾಸ್ತಾನು ಪ್ರಮಾಣ ಎಷ್ಟು? ಇದಕ್ಕೆ ತೊಡಗಿಸಿರುವ ಹಣವೆಷ್ಟು?

ಈ) ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಹಣದ ಪಾಲುಗಳೆಷ್ಟು? (ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು)

ಅ) 2000-01 ಮತ್ತು 2001-02ನೇ ಸಾಲಿನಲ್ಲಿ ರಾಜ್ಯದ ಮುಂಗಾರು ಮತ್ತು ಹಿಂಗಾರು: ಬೇಸಿಗೆ ಹಂಗಾಮಿನ ಆಹಾರ ಧಾನ್ಯಗಳ ಉತ್ಪಾದನೆ 109.49 ಮತ್ತು 83.05 ಲಕ್ಷ ಟನ್ ಇರುತ್ತದೆ.

ಆ) - ಹೌದು -